# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 437 |
| ಸದಸ್ಯರ ಹೆಸರು | ಶ್ರೀ ಪಿ. ಹೆಚ್. ಪೂಜಾರ್ |
| ಉತ್ತರಿಸಬೇಕಾದ ದಿನಾಂಕ | 10-03-2025 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಆಯುಷ್ ಇಲಾಖೆಯ ಸರ್ಕಾರಿ ಆಯುರ್ವೇದ ಆಸ್ಪತ್ರೆ, ಮಾರೇನಹಳ್ಳಿ, ಬೆಂಗಳೂರು ಉತ್ತರ, ಇಲ್ಲಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಆ.ಕು.ಕ. 322 ಪಿ.ಐ.ಎಂ. 2020, ದಿನಾಂಕ: 29.12.2020 ರನ್ವಯ ವರ್ಗಾವಣೆಯಾಗಿದ್ದರೂ ನಾಲ್ಕು ವರ್ಷಗಳಿಂದ ಮಹಿಳಾ ವೈದ್ಯಾಧಿಕಾರಿ ಅನಧಿಕೃತವಾಗಿ ಗೈರು ಆದ ಕಾರಣ ಆ ಪ್ರದೇಶದ ರೋಗಿಗಳಿಗೆ ತೊಂದರೆಯಾದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ಅವರ ಮೇಲೆ ಯಾವ ಕ್ರಮ ಕೈಗೊಂಡಿದೆ; | ಈ ವಿಷಯ ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಡಾ.ಮನೋರಮಾ ಕೆ., ವೈದ್ಯಾಧಿಕಾರಿ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಶಾಸಕರ ಭವನ, ಬೆಂಗಳೂರು ಇವರನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 332 ಪಿಐಎಂ 2020, ದಿನಾಂಕ: 29.12.2020 ರನ್ವಯ ಸರ್ಕಾರಿ ಆಯುರ್ವೇದ ಆಸ್ಪತ್ರೆ, ಮಾರೇನಹಳ್ಳಿ ಇಲ್ಲಿಗೆ ವರ್ಗಾಯಿಸಿ ಆದೇಶಿಸಲಾಗಿತ್ತು. ಆದರೆ, ಸದರಿಯವರು ವರ್ಗಾವಣೆಗೊಂಡ ಸ್ಥಳ ಸರ್ಕಾರಿ ಆಯುರ್ವೇದ ಆಸ್ಪತ್ರೆ. ಮಾರೇನಹಳ್ಳಿ ಇಲ್ಲಿ ನಿಗದಿತ ಅವಧಿಯೊಳಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ ಹಾಗೂ ಸದರಿಯವರು ಕರ್ತವ್ಯ ನಿರ್ವಹಿಸುತ್ತಿದ್ದ ಚಿಕಿತ್ಸಾಲಯಕ್ಕೆ ವರ್ಗಾವಣೆಯಾಗಿ ಬಂದ ಅಧಿಕಾರಿಗೆ ಪ್ರಭಾರವನ್ನು ವಹಿಸಿಕೊಡದೇ ದಿನಾಂಕ 30.12.2020 ರಿಂದ ಅನಧಿಕೃತ ಗೈರುಹಾಜರಾಗಿರುವ ಆರೋಪದ ಕುರಿತಂತೆ ಕಾರಣ ಕೇಳುವ ನೋಟೀಸಿನೊಂದಿಗೆ ದೋಷಾರೋಪಣಾ ಪಟ್ಟಿಯನ್ನು ಜಾರಿಗೊಳಿಸಲಾಗಿತ್ತು.<br><br>ತದನಂತರ, ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 97 ಐಎಂಎಂ 2023, ದಿನಾಂಕ: 28.08.2023 ರನ್ವಯ ಡಾ\|\| ಮನೋರಮಾ ಕೆ. ವೈದ್ಯಾಧಿಕಾರಿ, ಸರ್ಕಾರಿ ಆಯುರ್ವೇದ ಆಸ್ಪತ್ರೆ, ಮಾರೇನಹಳ್ಳಿ ಬೆಂಗಳೂರು ಉತ್ತರ ಹಾಗೂ ಡಾ\|\| ವೀಣಾ ಕೃಷ್ಣಮೂರ್ತಿ, ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ. ಶಾಸಕರ ಭವನ, ಬೆಂಗಳೂರು ಇವರುಗಳನ್ನು ಪರಸ್ಪರ ವರ್ಗಾಯಿಸಲಾಗಿತ್ತು. ಇದನ್ನು ಪ್ರಶ್ನಿಸಿ, ಡಾ\|\| ವೀಣಾ ಕೃಷ್ಣಮೂರ್ತಿ ರವರು ಮಾನ್ಯ ಕೆ.ಎ.ಟಿ.ಯಲ್ಲಿ ಅರ್ಜಿ ಸಂಖ್ಯೆ 3888/2023ನ್ನು ದಾಖಲಿಸಿದ್ದರ ಮೇರೆಗೆ, ಮಾನ್ಯ ನ್ಯಾಯಾಲಯವು ಸದರಿಯವರ ಅರ್ಜಿಯನ್ನು ಪುರಸ್ಕರಿಸಿ, ದಿನಾಂಕ: 15.03.2024 ರಂದು ತೀರ್ಪು ನೀಡಿತ್ತು.<br><br>ಈ ಮಧ್ಯೆದಲ್ಲಿ ಡಾ. ಮನೋರಮಾ ಕೆ, ವೈದ್ಯಾಧಿಕಾರಿ ಇವರು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿನ ಅಂಶಗಳು ಹಾಗೂ ಇವರ ಮೇಲಿನ ಆರೋಪಗಳ ಬಗ್ಗೆ ಸತ್ಯಾಸತ್ಯತೆಯನ್ನು ಅರಿಯುವ ಸಲುವಾಗಿ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಯನ್ನು ಸರ್ಕಾರದ ಆದೇಶ ಸಂಖ್ಯೆ: ಆಕುಕ 276 ಪಿಐಎಂ 2021, ದಿನಾಂಕ: 01.04.2024 ರನ್ವಯ ನೇಮಿಸಿ ಆದೇಶಿಸಲಾಗಿತ್ತು. |
| ಆ) | ಸದರಿ ಮಹಿಳಾ ವೈದ್ಯಾಧಿಕಾರಿಯು ಇದೇ ಜನವರಿ ತಿಂಗಳಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದಕ್ಕೆ ಸರ್ಕಾರದ ಕ್ರಮ ಏನು; ಅವರ ವಿರುದ್ಧ ಇಲಾಖಾ ಕ್ರಮ ಜರುಗಿಸುವ ಪ್ರಕ್ರಿಯೆ ಜಾರಿಯಲಿದೆಯೇ; | ಮುಂದುವರೆದು, ಆಯುಕ್ತರ ಶಿಫಾರಸ್ಸಿನಂತೆ ಡಾ\|\| ಕೆ. ಮನೋರಮಾ ವೈದ್ಯಾಧಿಕಾರಿ ಇವರು ವರ್ಗಾವಣೆಗೊಂಡ ಸ್ಥಳದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೆ ಪದೇ ಪದೇ ರಜಾ ಅರ್ಜಿಗಳನ್ನು ಇಮೇಲ್ ಮುಖಾಂತರ ನಿರ್ದೇಶನಾಲಯಕ್ಕೆ ಸಲ್ಲಿಸುತ್ತಿದ್ದು. ಪ್ರಸ್ತುತ ಇದುವರೆವಿಗೂ ಸದರಿ ವೈದ್ಯಾಧಿಕಾರಿಯವರು ವರ್ಗಾವಣೆಗೊಂಡ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗದೆ ಗೈರು ಹಾಜರಿಯಾಗಿ ಸರ್ಕಾರದ ಆದೇಶಗಳನ್ನು ಪಾಲಿಸುವಲ್ಲಿ ನಿರ್ಲಕ್ಷ್ಯತೆ ತೋರಿ, ಮಾರೇನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರು ಬಡರೋಗಿಗಳು, ಆಯುಷ್ ಚಿಕಿತ್ಸೆಯಿಂದ ವಂಚಿತರಾಗಲು ಕಾರಣರಾಗಿರುವ ಹಾಗೂ ಸದರಿ |

ನಡವಳಿಕೆಯು ಸಾರ್ವಜನಿಕ ಆರೋಗ್ಯ ಪಾಲನೆಯ ಸರ್ಕಾರದ ಕಳಕಳಿಗೆ ವಿರುದ್ಧವಾಗಿದ್ದು, ಮತ್ತು ಸದರಿ ಅಧಿಕಾರಿಯು ಸರ್ಕಾರಿ ನೌಕರರ ಶಿಸ್ತನ್ನು ಉಲ್ಲಂಘಿಸಿರುವ ಹಿನ್ನೆಲೆಯಲ್ಲಿ ಡಾ.ಮನೋರಮ ಕೆ. ವೈದ್ಯಾಧಿಕಾರಿ, ಮಾರೇನಹಳ್ಳಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇವರನ್ನು ಸರ್ಕಾರದ ಆದೇಶ ಸಂಖ್ಯೆ: ಆಕುಕ 276 ಪಿಐಎಂ 2021, ದಿನಾಂಕ: 16.07.2024 ರನ್ವಯ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಲಾಗಿತ್ತು.

ಮಾನ್ಯ ಕೆ.ಎ.ಟಿ. ಅರ್ಜಿ ಸಂಖ್ಯೆ 3888/2023ರ ಪ್ರಕರಣದಲ್ಲಿ ನೀಡಿರುವ ತೀರ್ಪಿನ ವಿರುದ್ಧ ಡಾ|| ಮನೋರಮಾ ಕೆ. ವೈದ್ಯಾಧಿಕಾರಿ, ಇವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 11973/2024ನ್ನು ದಾಖಲಿಸಿದ್ದರ ಮೇರೆಗೆ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 24.07.2024ರಂದು ನೀಡಿರುವ ತೀರ್ಪಿನ ಪ್ರಮುಖ ಉದ್ಧೃತ ಭಾಗ ಈ ಕೆಳಕಂಡಂತಿದೆ:-

> 9. In the above factual situation, we are of the opinion that there is no error in the findings recorded by the Tribunal. It is for the petitioner to report for duty at the transferred post and seek appropriate posting in accordance with the prescribed procedure.
>
> 10. The writ petition therefore fails, the same is accordingly dismissed".

ಅಲ್ಲದೇ, ಡಾ|| ಮನೋರಮಾ ಕೆ ರವರು ಇವರ ಮೇಲೆ ಸರ್ಕಾರದ ಆದೇಶ 276 ಪಿಐಎಂ 2021, ದಿನಾಂಕ: 01.04.2024 ರನ್ವಯ ಇಲಾಖಾ ವಿಚಾರಣೆಗೆ ಆದೇಶಿಸಿದ್ದರ ವಿರುದ್ಧ ಮಾನ್ಯ ಕೆ.ಎ.ಟಿ ಅರ್ಜಿ ಸಂಖ್ಯೆ 4377/2024 ದಾಖಲಿಸಿದ್ದರೆ ಮೇರೆಗೆ ಮಾನ್ಯ ನ್ಯಾಯಾಲಯವು ದಿನಾಂಕ. 05.09.2024ರಂದು ನೀಡಿರುವ ಮಧ್ಯಂತರ ಆದೇಶದಲ್ಲಿ ತಡೆಯಾಜ್ಞೆ ನೀಡಿರುತ್ತದೆ. ಹಾಗೆಯೇ ಡಾ|| ಮನೋರಮಾ ಕೆ.ರವರು ಅಮಾನತ್ತು ಆದೇಶದ ವಿರುದ್ಧ ಮಾನ್ಯ ಕೆ.ಎ.ಟಿ. ಯಲ್ಲಿ ಅರ್ಜಿ ಸಂಖ್ಯೆ 4744/2024, ದಾಖಲಿಸಿದ್ದರ ಮೇರೆಗೆ ಮಾನ್ಯ ನ್ಯಾಯಮಂಡಳಿಯು ದಿನಾಂಕ: 03.10.2024ರಂದು ನೀಡಿರುವ ಮಧ್ಯಂತರ ಆದೇಶದಲ್ಲಿಯೂ ಸಹ ಅಮಾನತ್ತು ಆದೇಶಕ್ಕೆ ತಡೆಯಾಜ್ಞೆ ನೀಡಿರುತ್ತದೆ.

ಗೌರವಾನ್ವಿತ ಉಚ್ಚ ನ್ಯಾಯಾಲಯದ ಸೂಚನೆಯನ್ನು ಪಾಲಿಸುವ ಸಲುವಾಗಿ ಶಿಸ್ತು ಪ್ರಾಧಿಕಾರಿ ಹೊರಡಿಸಿರುವ ದಿನಾಂಕ: 16.07.2024 ರ ಅಮಾನತ್ತು ಆದೇಶವನ್ನು ರದ್ದುಪಡಿಸಿ. ಸರ್ಕಾರಿ ಆಯುರ್ವೇದ ಆಸ್ಪತ್ರೆ, ಮಾರೇನಹಳ್ಳಿಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ಡಾ. ಮನೋರಮಾ ಕೆ ರವರು ಮನವಿಯಲ್ಲಿ ಕೋರಿದ್ದರು.

ಸರ್ಕಾರದ ಆದೇಶ ಸಂಖ್ಯೆ:ಆಕುಕ 199 ಪಿಐಎಂ 2024, ದಿನಾಂಕ:21.01.2025ರಲ್ಲಿ (**ಅನುಬಂಧದಲ್ಲಿ ನೀಡಲಾಗಿದೆ**) ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 11973/2024ರ ಪ್ರಕರಣದಲ್ಲಿ ದಿನಾಂಕ: 24.07.2024ರಂದು ನೀಡಿರುವ ಆದೇಶದನ್ವಯ, ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 332 ಪಿಐಎಂ 2020, ದಿನಾಂಕ: 29.12.2020 ರಂತೆ ಡಾ. ಮನೋರಮಾ ಇವರು ಸರ್ಕಾರಿ ಆಯುರ್ವೇದ ಆಸ್ಪತ್ರೆ, ಮಾರೇನಹಳ್ಳಿ, ಬಾಗಲೂರು, ಬೆಂಗಳೂರು ಉತ್ತರ ಇಲ್ಲಿನ ವೈದ್ಯಾಧಿಕಾರಿ ಹುದ್ದೆಗೆ ಕಾರ್ಯ ವರದಿ ಮಾಡಿಕೊಳ್ಳುವ ಸಲುವಾಗಿ ಇವರ ವಿರುದ್ಧದ ಇಲಾಖಾ ವಿಚಾರಣೆಗೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಆಡಳಿತ

| | | |
|---|---|---|
| | | ನ್ಯಾಯಮಂಡಳಿಯಲ್ಲಿನ ಅರ್ಜಿ ಸಂಖ್ಯೆ: 4377/2024 ರಲ್ಲಿ ಮಾನ್ಯ ನ್ಯಾಯಮಂಡಳಿಯು ನೀಡುವ ಅಂತಿಮ ತೀರ್ಪಿನ ಷರತ್ತಿಗೊಳಪಟ್ಟು ಸದರಿಯವರ ಅಮಾನತ್ತನ್ನು ತೆರವುಗೊಳಿಸಿ, ಸೇವೆಗೆ ಪುನರ್ ಸ್ಥಾಪಿಸಿ ಆದೇಶಿಸಲಾಗಿದೆ. ಅದರಂತೆ ಸದರಿ ವೈದ್ಯಾಧಿಕಾರಿಗಳು ದಿನಾಂಕ 27.01.2025ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡು ಕಾರ್ಯನಿರ್ವಹಿಸುತ್ತಿದ್ದಾರೆ.<br><br>ಡಾ|| ಮನೋರಮಾ ಕೆ. ರವರು ಇವರ ಮೇಲೆ ಸರ್ಕಾರದ ಆದೇಶ ಸಂಖ್ಯೆ: ಆಕುಕ 276 ಪಿಐಎಂ 2021, ದಿನಾಂಕ: 01.04.2024 ರನ್ವಯ ಇಲಾಖಾ ವಿಚಾರಣೆಗೆ ಆದೇಶಿಸಿದ್ದರ ವಿರುದ್ಧ ಮಾನ್ಯ ಕೆ.ಎ.ಟಿ. ಯಲ್ಲಿ ಅರ್ಜಿ ಸಂಖ್ಯೆ: 4377/2024 ದಾಖಲಿಸಿದ್ದರ ಮೇರೆಗೆ ಮಾನ್ಯ ನ್ಯಾಯ ಮಂಡಳಿಯು ದಿನಾಂಕ: 05.09.2024ರಂದು ನೀಡಿರುವ ಮಧ್ಯಂತರ ಆದೇಶದಲ್ಲಿ ತಡೆಯಾಜ್ಞೆ ನೀಡಿರುತ್ತದ್ದೆ. ಮಾನ್ಯ ಆಡಳಿತ ನ್ಯಾಯ ಮಂಡಳಿ ನೀಡುವ ಅಂತಿಮ ತೀರ್ಪಿನಂತೆ ಮುಂದಿನ ಕ್ರಮ ವಹಿಸಲಾಗುವುದು. |
| ಇ) | ಇಂತಹ ಪ್ರಕರಣಗಳು ರಾಜ್ಯದ ಆಯುಷ್ ಇಲಾಖೆಯಲ್ಲಿ ಮರುಕಳಿಸದಂತೆ ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | ಇಂತಹ ಪ್ರಕರಣಗಳು ಕಂಡುಬಂದಲ್ಲಿ, ಅಂತಹವರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ಆಕುಕ 61 ಪಿಟಿಡಿ 2025

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

**<u>ಕರ್ನಾಟಕ ಸರ್ಕಾರದ ನಡವಳಿಗಳು</u>**

**ವಿಷಯ:** ಡಾ|| ಮನೋರಮಾ.ಕೆ, ವೈದ್ಯಾಧಿಕಾರಿ (ಪ್ರಸ್ತುತ ಅಮಾನತ್ತಿನಲ್ಲಿ ರುವವರು) ಇವರ ಅಮಾನತ್ತನ್ನು ತೆರವುಗೊಳಿಸುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 332 ಪಿಐಎಂ 2020 ದಿನಾಂಕ: 29.12.2020.
2. ಕಾರಣ ಕೇಳುವ ನೋಟೀಸ್ ಸಂಖ್ಯೆ: ಆಕುಕ 276 ಪಿಐಎಂ 2021, ದಿನಾಂಕ: 05.07.2023.
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 97 ಐಎಂಎಂ 2023 ದಿನಾಂಕ: 28.08.2023
4. ಸರ್ಕಾರದ ಆದೇಶ ಸಂಖ್ಯೆ: ಆಕುಕ 276 ಪಿಐಎಂ 2021, ದಿನಾಂಕ: 01.04.2024.
5. ಸರ್ಕಾರದ ಆದೇಶ ಸಂಖ್ಯೆ: ಆಕುಕ 276 ಪಿಐಎಂ 2021, ದಿನಾಂಕ: 16.07.2024.
6. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 11973/2024ರ ಪ್ರಕರಣದಲ್ಲಿ ದಿನಾಂಕ: 24-07-2024 ರಂದು ನೀಡಿರುವ ಆದೇಶ.
7. ಡಾ. ಮನೋರಮಾ ಕೆ ಇವರ ಮನವಿ ದಿನಾಂಕ: 19.08.2024.

**<u>ಪ್ರಸ್ತಾವನೆ:</u>**

ಮೇಲೆ ಓದಲಾದ ಕ್ರ.ಸಂ. (1)ರಲ್ಲಿ ಡಾ.ಮನೋರಮಾ ಕೆ., ವೈದ್ಯಾಧಿಕಾರಿ (ಪ್ರಸ್ತುತ ಅಮಾನತ್ತಿನಲ್ಲಿರುವವರು), ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಶಾಸಕರ ಭವನ, ಬೆಂಗಳೂರು ಇವರನ್ನು ಸರ್ಕಾರಿ ಆಯುರ್ವೇದ ಆಸ್ಪತ್ರೆ, ಮಾರೇನಹಳ್ಳಿ, ಇಲ್ಲಿಗೆ ವರ್ಗಾಯಿಸಿ ಆದೇಶಿಸಲಾಗಿರುತ್ತದೆ. ಆದರೆ, ಸದರಿಯವರು ವರ್ಗಾವಣೆಗೊಂಡ ಸ್ಥಳ ಸರ್ಕಾರಿ ಆಯುರ್ವೇದ ಆಸ್ಪತ್ರೆ, ಮಾರೇನಹಳ್ಳಿ ಇಲ್ಲಿ ನಿಗದಿತ ಅವಧಿಯೊಳಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ ಹಾಗೂ ಸದರಿಯವರು ಕರ್ತವ್ಯ ನಿರ್ವಹಿಸುತ್ತಿದ್ದ ಚಿಕಿತ್ಸಾಲಯಕ್ಕೆ ವರ್ಗಾವಣೆಯಾಗಿ ಬಂದ ಅಧಿಕಾರಿಗೆ ಪ್ರಭಾರವನ್ನು ವಹಿಸಿಕೊಡದೇ ದಿನಾಂಕ 30.12.2020 ರಿಂದ ಅನಧಿಕೃತ ಗೈರುಹಾಜರಾಗಿರುವ ಆರೋಪದ ಕುರಿತಂತೆ ಮೇಲೆ ಓದಲಾದ ಕ್ರ.ಸಂ. (2)ರಲ್ಲಿ ಕಾರಣ ಕೇಳುವ ನೋಟೀಸಿನೊಂದಿಗೆ ದೋಷಾರೋಪಣಾ ಪಟ್ಟಿಯನ್ನು ಜಾರಿಗೊಳಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರ. ಸಂ. (3)ರ ಅಧಿಸೂಚನೆಯ ಕ್ರಮ ಸಂಖ್ಯೆ: 8- 9 ರಲ್ಲಿ ಡಾ|| ಮನೋರಮಾ ಕೆ. ವೈದ್ಯಾಧಿಕಾರಿ, ಸರ್ಕಾರಿ ಆಯುರ್ವೇದ ಆಸ್ಪತ್ರೆ, ಮಾರೇನಹಳ್ಳಿ, ಬೆಂಗಳೂರು ಉತ್ತರ ಹಾಗೂ ಡಾ|| ವೀಣಾ ಕೃಷ್ಣಮೂರ್ತಿ, ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಶಾಸಕರ ಭವನ, ಬೆಂಗಳೂರು ಇವರುಗಳನ್ನು ಪರಸ್ಪರ ವರ್ಗಾಯಿಸಲಾಗಿರುತ್ತದೆ.

ಡಾ|| ವೀಣಾ ಕೃಷ್ಣಮೂರ್ತಿ ರವರು ದಿನಾಂಕ: 28-08-2023ರ ವರ್ಗಾವಣೆ ಅಧಿಸೂಚನೆಯ ವಿರುದ್ಧ ಮಾನ್ಯ ಕೆ.ಎ.ಟಿ.ಯಲ್ಲಿ ಅರ್ಜಿ ಸಂಖ್ಯೆ: 3888/2023ನ್ನು ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ: 15.03.2024 ರಂದು ನೀಡಿರುವ ತೀರ್ಪಿನ ಉದ್ಧೃತ ಭಾಗ ಕೆಳಕಂಡಂತಿದೆ:-

> **"Application is allowed and the Notification bearing No.Akuka 97 IMM 2023, dated: 28.08.2023 issued by 1st respondent, in so far as it relates to applicant and 4th..... respondent, is set aside. However, liberty is reserved to the respondents for initiating proceedings for transfer as per the Act and Rules. In view of setting-aside the order, the applicant is entitled to continue in the earlier place till her transfer is necessitated in accordance with the provisions".**

ಮೇಲೆ ಓದಲಾದ ಕ್ರ. ಸಂ. (4)ರ ಸರ್ಕಾರದ ಆದೇಶದಲ್ಲಿ, ಡಾ|| ಮನೋರಮಾ.ಕೆ, ವೈದ್ಯಾಧಿಕಾರಿಗಳು ಇವರು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿನ ಅಂಶಗಳು ಹಾಗೂ ಇವರ ಮೇಲಿನ ಆರೋಪಗಳ ಬಗ್ಗೆ ಸತ್ಯಾಸತ್ಯತೆಯನ್ನು ಅರಿಯುವ ಸಲುವಾಗಿ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಯನ್ನು ನೇಮಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಸಂ. (5)ರ ಆದೇಶದಲ್ಲಿ, ಆಯುಕ್ತರ ಶಿಫಾರಸ್ಸಿನಂತೆ ಡಾ|| ಕೆ. ಮನೋರಮಾ ವೈದ್ಯಾಧಿಕಾರಿಗಳು ಇವರು ವರ್ಗಾವಣೆಗೊಂಡ ಸ್ಥಳದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೆ ಪದೇ ಪದೇ ರಜಾ ಅರ್ಜಿಗಳನ್ನು ಇ-ಮೇಲ್ ಮುಖಾಂತರ ನಿರ್ದೇಶನಾಲಯಕ್ಕೆ ಸಲ್ಲಿಸುತ್ತಿದ್ದು, ಪ್ರಸ್ತುತ ಇದುವರೆವಿಗೂ ಸದರಿ ವೈದ್ಯಾಧಿಕಾರಿಯವರು ವರ್ಗಾವಣೆಗೊಂಡ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗದೆ ಗೈರು ಹಾಜರಿಯಾಗಿ ಸರ್ಕಾರದ ಆದೇಶಗಳನ್ನು ಪಾಲಿಸುವಲ್ಲಿ ನಿರ್ಲಕ್ಷತೆ ತೋರಿ, ಮಾರೇನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರು ಬಡರೋಗಿಗಳು, ಆಯುಷ್ ಚಿಕಿತ್ಸೆಯಿಂದ ವಂಚಿತರಾಗಲು ಕಾರಣರಾಗಿರುವ ಹಾಗೂ ಸದರಿ ನಡವಳಿಕೆಯು ಸಾರ್ವಜನಿಕ ಆರೋಗ್ಯ ಪಾಲನೆಯ ಸರ್ಕಾರದ ಕಳಕಳಿಗೆ ವಿರುದ್ಧವಾಗಿದ್ದು, ಮತ್ತು ಸದರಿ ಅಧಿಕಾರಿಯು ಸರ್ಕಾರಿ ನೌಕರರ ಶಿಸ್ತನ್ನು ಉಲ್ಲಂಘಿಸಿರುವ ಹಿನ್ನೆಲೆಯಲ್ಲಿ ಡಾ.ಮನೋರಮ ಕೆ. ವೈದ್ಯಾಧಿಕಾರಿ, ಮಾರೇನಹಳ್ಳಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಲಾಗಿರುತ್ತದ.

ಈ ಮಧ್ಯದಲ್ಲಿ ಮಾನ್ಯ ಕೆ.ಎ.ಟಿ. ಅರ್ಜಿ ಸಂಖ್ಯೆ: 3888/2023ರ ಪ್ರಕರಣದಲ್ಲಿ ನೀಡಿರುವ ತೀರ್ಪಿನ ವಿರುದ್ಧ ಡಾ|| ಮನೋರಮಾ ಕೆ. ವೈದ್ಯಾಧಿಕಾರಿ, ಇವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 11973/2024ನ್ನು ದಾಖಲಿಸಿದ್ದರ ಮೇರೆಗೆ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 24.07.2024ರಂದು ನೀಡಿರುವ ತೀರ್ಪಿನ ಪ್ರಮುಖ ಉದ್ಧೃತ ಭಾಗ ಈ ಕೆಳಕಂಡಂತಿದೆ:-

**9. In the above factual situation, we are of the opinion that there is no error in the findings recorded by the Tribunal. It is for the petitioner to report for duty at the transferred post and seek appropriate posting in accordance with the prescribed procedure.**

**10. The writ petition therefore fails, the same is accordingly dismissed".**

ಅಲ್ಲದೇ, ಮೇಲೆ ಓದಲಾದ ಕ್ರ. ಸಂ. (6) ಗಳಲ್ಲಿ ಡಾ|| ಮನೋರಮಾ ಕೆ. ರವರು ಇವರ ಮೇಲೆ ಸರ್ಕಾರದ ಆದೇಶ ಸಂಖ್ಯೆ: ಆಕುಕ **276** ಪಿಐಎಂ **2021**, ದಿನಾಂಕ: **01.04.2024** ರನ್ವಯ ಇಲಾಖಾ ವಿಚಾರಣೆಗೆ ಆದೇಶಿಸಿದ್ದರ ವಿರುದ್ಧ ಮಾನ್ಯ ಕೆ.ಎ.ಟಿ. ಯಲ್ಲಿ ಅರ್ಜಿ ಸಂಖ್ಯೆ: **4377/2024** ದಾಖಲಿಸಿದ್ದರ ಮೇರೆಗೆ ಮಾನ್ಯ ನ್ಯಾಯಾಲಯವು ದಿನಾಂಕ: **05.09.2024**ರಂದು ನೀಡಿರುವ ಮಧ್ಯಂತರ ಆದೇಶದಲ್ಲಿ ತಡೆಯಾಜ್ಞೆ ನೀಡಿರುತ್ತದೆ, ಹಾಗೆಯೇ ಡಾ|| ಮನೋರಮಾ ಕೆ.ರವರು ಅಮಾನತ್ತು ಆದೇಶದ ವಿರುದ್ಧ ಮಾನ್ಯ ಕೆ.ಎ.ಟಿ. ಯಲ್ಲಿ ಅರ್ಜಿ ಸಂಖ್ಯೆ **4744/2024**, ದಾಖಲಿಸಿದ್ದರ ಮೇರೆಗೆ ಮಾನ್ಯ ನ್ಯಾಯಮಂಡಳಿಯು ದಿನಾಂಕ: **03.10.2024**ರಂದು ನೀಡಿರುವ ಮಧ್ಯಂತರ ಆದೇಶದಲ್ಲಿಯೂ ಸಹ ಅಮಾನತ್ತು ಆದೇಶಕ್ಕೆ ತಡೆಯಾಜ್ಞೆ ನೀಡಿರುತ್ತದೆ.

ಮೇಲೆ ಓದಲಾದ ಕ್ರ. ಸಂ. (7) ರ ಮನವಿಯಲ್ಲಿ ಗೌರವಾನ್ವಿತ ಉಚ್ಚ ನ್ಯಾಯಾಲಯದ ಸೂಚನೆಯನ್ನು ಪಾಲಿಸುವ ಸಲುವಾಗಿ ಶಿಸ್ತು ಪ್ರಾಧಿಕಾರಿ ಹೊರಡಿಸಿರುವ ದಿನಾಂಕ: 16.07.2024 ರ ಅಮಾನತ್ತು ಆದೇಶವನ್ನು ರದ್ದುಪಡಿಸಿ, ಸರ್ಕಾರಿ ಆಯುರ್ವೇದ ಆಸ್ಪತ್ರೆ, ಮಾರೇನಹಳ್ಳಿಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ಕೋರಿರುತ್ತಾರೆ.

ಮೇಲಿನ ವಿವರಗಳು ಹಾಗೂ ಲಭ್ಯವಿರುವ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 199 ಪಿಐಎಂ 2024, ಬೆಂಗಳೂರು,**
**ದಿನಾಂಕ:21.01.2025**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 11973/2024ರ ಪ್ರಕರಣದಲ್ಲಿ ದಿನಾಂಕ: 24.07.2024ರಂದು ನೀಡಿರುವ ಆದೇಶದನ್ವಯ, ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 332 ಪಿಐಎಂ 2020, ದಿನಾಂಕ: 29.12.2020 ರಂತೆ ಡಾ. ಮನೋರಮಾ (ಪ್ರಸ್ತುತ ಅಮಾನತ್ತಿನಲ್ಲಿರುವವರು) ಇವರು ಸರ್ಕಾರಿ ಆಯುರ್ವೇದ ಆಸ್ಪತ್ರೆ, ಮಾರೇನಹಳ್ಳಿ, ಬಾಗಲೂರು, ಬೆಂಗಳೂರು ಉತ್ತರ ಇಲ್ಲಿನ ವೈದ್ಯಾಧಿಕಾರಿ ಹುದ್ದೆಗೆ ಕಾರ್ಯ ವರದಿ ಮಾಡಿಕೊಳ್ಳುವ ಸಲುವಾಗಿ ಇವರ ವಿರುದ್ಧದ ಇಲಾಖಾ ವಿಚಾರಣೆಗೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿನ ಅರ್ಜಿ ಸಂಖ್ಯೆ: 4377/2024 ರಲ್ಲಿ ಮಾನ್ಯ ನ್ಯಾಯಮಂಡಳಿಯು ನೀಡುವ ಅಂತಿಮ ತೀರ್ಪಿನ ಷರತ್ತಿಗೊಳಪಟ್ಟು ಸದರಿಯವರ ಅಮಾನತ್ತನ್ನು ತೆರವುಗೊಳಿಸಿ, ಸೇವೆಗೆ ಪುನರ್ ಸ್ಥಾಪಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

21/1
(ಶ್ರೀಪತಿ ಪಿ.ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾವೈಪ ಮತ್ತು ಸಮನ್ವಯ)

21/01

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ/ಇ&ಆರ್. ಎಸ್.ಇ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560 001.
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ ಪಾರ್ಕ್ ಹೌಸ್ ರಸ್ತೆ, ಅಂಚೆಪೆಟ್ಟಿಗೆ ಸಂಖ್ಯೆ: 5329, 560 001.
3. ಆಯುಕ್ತರು, ಆಯುಷ್ ಇಲಾಖೆ, ಧನ್ವಂತರಿ ರಸ್ತೆ, ಬೆಂಗಳೂರು.
4. ಮುಖ್ಯ ಆಡಳಿತಾಧಿಕಾರಿ, ಆಯುಷ್ ಇಲಾಖೆ, ಧನ್ವಂತರಿ ರಸ್ತೆ, ಬೆಂಗಳೂರು.
5. ಸಂಬಂಧಪಟ್ಟ ಅಧಿಕಾರಿಗೆ (ಆಯುಷ್ ಆಯುಕ್ತರ ಮುಖಾಂತರ).
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

**ಪ್ರತಿ:**

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಅಪರ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರು, ವಿಕಾಸಸೌಧ, ಬೆಂಗಳೂರು.